## ಬೃಹತ್ ಬೆಂಗಳೂರು ಮಹಾನಗರ ಪಾಲಿಕೆ

**ರಾಜರಾಜೇಶ್ವರಿ ನಗರ ವಲಯ ವ್ಯಾಪ್ತಿಯ, ರಾಜರಾಜೇಶ್ವರಿ ನಗರ ಉಪ ವಿಭಾಗದ ವಾರ್ಡ್-ಸಂಖ್ಯೆ 129 ರಲ್ಲಿ ದಿನಾಂಕ:19.07.2021 ನಡೆದ ವಾರ್ಡ್ ಸಮಿತಿ ಸಭೆಯ ಸಭಾ ನಡವಳಿಗಳು.**

ದಿನಾಂಕ: 19.07.2021 ರಂದು ವಾರ್ಡ್ ಸಂಖ್ಯೆ 129ರ ಜುಲೈ ಮಾಹೆಯ ವಾರ್ಡ್ ಸಮಿತಿ ಸಭೆಯನ್ನು ಸ್ಥಳೀಯ ನಿವಾಸಿಗಳ ಕೋರಿಕೆಯ ಮೇರೆಗೆ ಜೂಮ್ ಮೀಟಿಂಗ್ ಮುಖೇನ ನಡೆಸಲಾಯಿತು. ಈ ಕೆಳಕಂಡಂತೆ ಸದಸ್ಯರು / ಸಾರ್ವಜನಿಕರು ಭಾಗವಹಿಸಿರುತ್ತಾರೆ.

**ಸಭೆಯಲ್ಲಿ ಹಾಜರಿದ್ದ ಅಧಿಕಾರಿಗಳು:**

1. ಶ್ರೀ.ಜೆ.ವಿಶ್ವನಾಥ್, ವಾರ್ಡ್ 129 ನೋಡಲ್ ಅಧಿಕಾರಿ
2. ಕಿರಿಯ ಅಭಿಯಂತರರು ರವರ ಪರವಾಗಿ ಶ್ರೀ.ಮಂಜು ರವರು ಹಾಜರಾಗಿರುತ್ತಾರೆ.
3. ಶ್ರೀ.ಮಂಜುನಾಥ್ ಆರ್ ಮಾರ್ಷಲ್ ವಾರ್ಡ್-129
4. ಶ್ರೀ.ಭಟ್, ವಾರ್ಡ್-129 14ನೇ ಬ್ಲಾಕಿನ ಕ್ಷೇಮಾಭಿವೃದ್ಧಿ ಸಂಘದ ಪರವಾಗಿ
5. ಶ್ರೀಮತಿ ಶೋಭಾ ಭಟ್, ವಾರ್ಡ್-129 14ನೇ ಸ್ಥಳೀಯ ನಿವಾಸಿ 3ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿನಗರ.
6. ಶ್ರೀ.ಧನಂಜಯ್, ವಾರ್ಡ್-129 14ನೇ ಸ್ಥಳೀಯ ನಿವಾಸಿ 3ನೇ ಮುಖ್ಯರಸ್ತೆ, ಅನ್ನಪೂರ್ಣೇಶ್ವರಿನಗರ.
7. ಶ್ರೀ.ರಾಮಣ್ಣ, ಸ್ಥಳೀಯ ನಿವಾಸಿ, ಎನ್.ಜಿ.ಇ.ಎಫ್ ಬಡಾವಣೆ, ಮಲ್ಲತ್ತಹಳ್ಳಿ
8. ಶ್ರೀ.ವಿಜಯ್, ಕಿರಿಯ ಆರೋಗ್ಯ ಪರಿವೀಕ್ಷಕರು ವಾರ್ಡ್-129
9. ಶ್ರೀ.ವಿ.ಉಡುಪ, ಅನ್ನಪೂರ್ಣೇಶ್ವರಿನಗರ, ಮತ್ತು ಇತರರು.

ಕೋವೀಡ್-19 ವೈರಾಣು ವ್ಯಾಪಕವಾಗಿ ಹರಡುತ್ತಿರುವುದರಿಂದ ಹಾಗೂ ಪ್ರತಿ ಮಾಹೆ ನಡೆಸಲಾಗುತ್ತಿದ್ದ ವಾರ್ಡ್ ಸಮಿತಿಯ ಸಭೆಯನ್ನು ಜೂಮ್ ಮೀಟಿಂಗ್ ಅನ್ವಯ ಎಲ್ಲಾರನ್ನು ಆಹ್ವಾನಿಸಿ ಸಭೆಯನ್ನು ನಡೆಸಲಾಯಿತು. ಸದರಿ ಜೂಮ್ ಮೀಟಿಂಗ್‌ನಲ್ಲಿ ಭಾಗವಹಿಸಿದ್ದ, ಎಲ್ಲಾ ಸ್ಥಳೀಯ ನಿವಾಸಿಗಳನ್ನು/ಸದಸ್ಯರನ್ನು ಸ್ವಾಗತಿಸುತ್ತಾ, ಸಭೆಯನ್ನು ನೋಡಲ್ ಅಧಿಕಾರಿಗಳು ವಾರ್ಡ್ 129 ರವರ ಅಧ್ಯಕ್ಷತೆಯಲ್ಲಿ ಪ್ರಾರಂಭಿಸಲಾಯಿತು.

ಹಾಜರಿದ್ದ ಸ್ಥಳೀಯ ನಿವಾಸಿಗಳೂ ಈ ಹಿಂದೆ ದಾಖಲಿಸಲಾದ ದೂರುಗಳ ಸಂಬಂಧ ಕೈಗೊಂಡ ಕ್ರಮದ ಬಗ್ಗೆ ಪ್ರತ್ಯೇಕ ದೂರುಗಳನ್ನು ಕ್ರಮವಹಿಸಿರುವ ಬಗ್ಗೆ ಸಭೆಯಲ್ಲಿ ಚರ್ಚಿಸಲಾಗಿ,

- ಘನತ್ಯಾಜ್ಯ ನಿರ್ವಹಣೆಗೆ ಸಂಬಂದಿಸಿದಂತೆ, ಬಹುತೇಕ ದೂರುಗಳನ್ನು ಕ್ರಮವಹಿಸಲಾಗಿದ್ದು, ಉಳಿದ ದೂರುಗಳ ಸಂಬಂಧ ಮುಂದಿನ ವಾರದೊಳಗೆ ಕ್ರಮವಹಿಸಲಾಗುವುದೆಂದು ಹಾಜರಿದ್ದ ಕಿರಿಯ ಆರೋಗ್ಯ ಪರಿವೀಕ್ಷರು ಸಭೆಯಲ್ಲಿ ಎಲ್ಲಾರಿಗೆ ಮಾಹಿತಿಗಾಗಿ ತಿಳಿಸಿರುತ್ತಾರೆ.
- ಹೆಲ್ತ್ ಬಡಾವಣೆಯ ಸ್ಥಳೀಯ ನಿವಾಸಿ ಒಬ್ಬರು ವಿಟಿಯು ಸ್ಥಳೀಯ ಕಛೇರಿಯ ಹತ್ತಿರ ರಸ್ತೆ ಬದಿಯಲ್ಲಿ ಶೇಖರಿಸಿರುವ ಡೆಬ್ರಿಸ್ ತೆರವುಗೊಳಿಸುವಂತೆ, ಕೋರಿದ್ದು, ತತ್ಸಂಬಂಧ ಕಿರಿಯ ಅಭಿಯಂತರರ ಪರವಾಗಿ ಹಾಜರಿದ್ದ, ಶ್ರೀ.ಮಂಜುರವರು ತೆರವುಗೊಳಿಸಲು ಕ್ರಮವಹಿಸುವುದಾಗಿ ತಿಳಿಸಿರುತ್ತಾರೆ.

- ಶ್ರೀ.ವೇಣುಗೋಪಾಲ್ ಎನ್.ಜಿ.ಎಫ್ ಬಡಾವಣೆ ನಿವಾಸಿಯವರು ನಾಗರಭಾವಿ ಮುಖ್ಯರಸ್ತೆ (ನಾಗರಭಾವಿ ವೃತ್ತದಿಂದ ಕೆಂಗುಂಟೆ ವೃತ್ತದ ಸರಪಳಿಯಲ್ಲಿ) 10ನೇ ಅಡ್ಡರಸ್ತೆಯ ಸಂದಿಸುವ ಜಾಗದಲ್ಲಿ ಅಧಿಕವಾಗಿರುವ ವಾಹನ ಸಂಚಾರವನ್ನು ನಿಯಂತ್ರಿಸಲು ರಸ್ತೆ ಹುಬ್ಬನ್ನು (Road Hump) ಮಾಡಿಸಿಕೊಡಬೇಕೆಂದು ಕೋರಿದ್ದು, ತತ್ಸಂಬಂಧ ಈಗಾಗಲೇ ಕಾರ್ಯಪಾಲಕ ಅಭಿಯಂತರರು-ಟಿಇಸಿ ಶ್ರೀ.ಶ್ರೀನಿವಾಸ ರವರೊಂದಿಗೆ ಚರ್ಚಿಸಿದ್ದು, ಸದರಿಯವರು ಶ್ರೀಘ್ರವಾಗಿ ಮಾಡಿಸಿಕೊಡುವುದಾಗಿ ತಿಳಿಸಿರುವ ವರದಿಯನ್ನು ನೋಡಲ್ ಅಧಿಕಾರಿಗಳು ಎಲ್ಲಾರ ಗಮನಕ್ಕೆ ತಿಳಿಯಪಡಿಸಲಾಯಿತು.
- BWSSB ಗೆ ಸಂಬಂಧಿಸಿದಂತೆ, ಎನ್.ಜಿ.ಎಫ್ ಬಡಾವಣೆಯ 14ನೇ ಅಡ್ಡರಸ್ತೆಯಲ್ಲಿ ಒಳಚರಂಡಿಯ ಪೈಪ್ ಅನ್ನು ಬದಲಾಯಿಸಿದ್ದು, ಸದರಿ ರಸ್ತೆ ಅಗೆತದ ಭಾಗವನ್ನು ದುರಸ್ಥಿ ಪಡಿಸಲು ಹಾಗೂ 2ನೇ ಎ ಅಡ್ಡರಸ್ತೆಯಲ್ಲಿ ದುರಸ್ಥಿಗೊಂಡಿರುವ ಒಳಚರಂಡಿಯ ಪೈಪ್ ಅನ್ನು ಬದಲಾಯಿಸಿಲು ಕೋರಿದ್ದು, ತತ್ಸಂಬಂಧ ಪತ್ರವನ್ನು ಸಿದ್ದಪಡಿಸಿ ಸಲ್ಲಿಸಲು ಕಿರಿಯ ಅಭಿಯಂತರರ ಪರವಾಗಿ ಹಾಜರಿದ್ದ ಶ್ರೀ.ಮಂಜು ರವರಿಗೆ ತಿಳಿಸಲಾಯಿತು.

ಮುಂದುವರೆದಂತೆ, ವಾರ್ಡ್ 129 ರ ವ್ಯಾಪ್ತಿಯಲ್ಲಿ ಬಹುತೇಕ ರಸ್ತೆಗಳಲ್ಲಿ ಉದ್ಭವಾಗಿರುವ ರಸ್ತೆಗುಂಡಿಗಳೂ/ರಸ್ತೆ ಅಗೆತವನ್ನು ಕೂಡಲೇ ಗುರುತಿಸಿ / ದಾಖಲಿಸಿಕೊಂಡು ಆದ್ಯತೆ ಮೇರೆಗೆ ಮುಚ್ಚಲು ಕ್ರಮವಹಿಸಬೇಕೆಂದು ವಾರ್ಡ್ 129ರ ಕಿರಿಯ ಅಭಿಯಂತರರಿಗೆ ನೋಡಲ್ ಅಧಿಕಾರಿಗಯವರು ಸೂಚಿಸಲಾಯಿತು ಹಾಗೂ ಈ ಹಿಂದೆ ಸ್ಥಳೀಯ ನಿವಾಸಿಗಳೂ ದಾಖಲಾಗಿರುವ ದೂರುಗಳಿಗೆ ಸಂಬಂದಿಸಿದಂತೆ, ಸಂಬಂಧಪಟ್ಟ ಅಧಿಕಾರಿಗಳು ಕೂಡಲೇ ಕ್ರಮವಹಿಸಿ ಮುಂದಿನ ಸಭೆಯಲ್ಲಿ ತಿಳಿಸಬೇಕೆಂದು ಕೋರುತ್ತಾ, ವಂದನೆಗಳೊಂದಿಗೆ ಸಭೆಯನ್ನು ಮುಕ್ತಾಯಗೊಳಿಸಲಾಯಿತಿ.

ಸಹಿ/-
ಕಾರ್ಯದರ್ಶಿಗಳು ವಾರ್ಡ್ ಸಮಿತಿ
ವಾರ್ಡ್ ಸಂಖ್ಯೆ-129

19/07
ನೋಡಲ್ ಅಧಿಕಾರಿಗಳು
ವಾರ್ಡ್ ಸಂಖ್ಯೆ-129

ಪ್ರತಿಯನ್ನು:-

1. ಆಪ್ತ ಸಹಾಯಕರು, ಮಾನ್ಯ ವಿಶೇಷ ಆಯುಕ್ತರು ಆಡಳಿತರವರಿಗೆ ಕಳುಹಿಸುತ್ತಾ, ಸದರಿ ಸಭೆಯ ನಡವಳಿಗಳನ್ನು ಮಾನ್ಯ ವಿಶೇಷ ಆಯುಕ್ತರು ಆಡಳಿತರವರ ಅವಗಾಹನೆಗೆ ತರಲು ಕೋರಿದೆ.
2. ಜಂಟಿ ಆಯುಕ್ತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
3. ಮುಖ್ಯ ಅಭಿಯಂತರು ರಾ.ರಾ.ನಗರ ವಲಯರವರ ಮಾಹಿತಿಗಾಗಿ
4. ಕಾರ್ಯಪಾಲಕ ಅಭಿಯಂತರರು ರಾ.ರಾ.ನಗರ ವಿಭಾಗ ರವರ ಮಾಹಿತಿಗಾಗಿ.
5. ಸಭೆಯಲ್ಲಿ ಹಾಜರಿದ್ದ ಹಾಗೂ ಸಂಬಂಧಿಸಿದ ಅದಿಕಾರಿಗಳಿಗೆ ಸೂಕ್ತ ಕ್ರಮಕ್ಕಾಗಿ
6. ವಾರ್ಡ್ ಸಮಿತಿ ಸದಸ್ಯರುಗಳಿಗೆ.
7. ಕಛೇರಿ ಪ್ರತಿ.